

ಮಲ್ಲಯ್ಯ ಹೊತ್ತುಗೊತ್ತಿಲ್ದ ದ್ಯಾವಮ್ಮನ ಗುಡಿಮೇಲೆ ಮೈಕ್ ಹಾಕಿದಾತ ಮತ್ತೆ ಬಂದು ಮಾಡಿದ್ದರಿಂದ ಅರೆ ನಿದ್ದ್ಯಾಗ ಪೂರ ಎಚ್ಚರಾಗಿತ್ತು. ಎಷ್ಟು ಒಳ್ಳಾಡಿದರೂ ನಿದ್ದಿನೇ ಬರಲಿಲ್ಲ. ಆಗಲೇ ಹೊರಗ ಬೆಳಕು ಮೂಡಿರಬೇಕು... ಕಿಟಕಿಯಿಂದ ಮನ್ಯಾಗ ಬೆಳಕೆಂಬುದು ದೀಗಿ ಬಿದ್ದಂಗ ಬಿದ್ದಿತ್ತು. ಇದೆ ಬೆಳಕಿಗೆ ಜಗಲಿಗಿಟ್ಟ ದೀಗಿನ ನೋಡಿದೆ. ದಿನರಾತ್ರಿ ಹಚ್ಚಿದಂಗ ಹರೇದಾಗಿ ಮಿಣಿಮಿಣಿ ಉರಿತಿತ್ತು. ದೀಗಿ ಪಕ್ಕ ಧ್ಯಾನಕ್ಕೆ ಕೂತಂತ ಅಕ್ಕಮಾದೇವಿಯ ಪೋಟನೂ ನೋಡಿದೆ. ಹಸಿರು ಕಾಡಿನ್ಯಾಗ, ಭಯ ಇಲ್ದಂಗ ಕೂದಲು ಹರಿವಿಕೆಂದು ಅಕ್ಕಮಹಾದೇವಿ ಕೂತಿದ್ಲು. ಜತಿಗೆ ಬಿಳಿಮೊಲ, ಚಿಗರಿ, ಗುಬ್ಬಿ, ನವಿಲು ಆಡುವ ಚಿತ್ರನೋಡಿ ಈ ಪೋಟ ನಿನ್ನೆಮೊನ್ನೆ ತಂದ ಹೊಚ್ಚಹೊಸದು ಕಂಡಂಗಾತು. ಈ ಪೋಟ ತಂದಾಗ ಅಭಿ ಇನ್ನೂ ಹುಟ್ಟಿರಲಿಲ್ಲ. ಆಗ ನನ್ನ ಕೂದಲು ಇದ್ರಕ್ಕಿಂತ ಬಾಳ ಚೆಂದ ಬೆಳಿದಿದ್ವು. ಹಿಂಗಾಗಿ ಆ ಜಾತ್ರ್ಯಾಗಿದ್ದ ನೂರಾರು ಪೋಟದಾಗ ಅಕ್ಕಮಾದೇವಿ ಪೋಟವೊಂದೇ ಚೆಂದ ಕಂಡಿತ್ತು. ಈ ಅಕ್ಕಮಾದೇವಿ ಕೂದಲದಷ್ಟು ನನ್ ಮೈಮ್ಯಾಗನೂ ಇದ್ದಾವಂಥ ಖುಷ್ಯಾಗಿ... ಅಭಿಮಾನಕ್ಕ ರೊಕ್ಕದ ಮಾರಿ ನೋಡಲಾರದೆ ಹುರುಪಿಲೆ ಈ ಪೋಟ ತಗಂದಿತ್ತು. ಹಿಂಗ ಪೋಟ ನೋಡುತ್ತ ಕಿಟಕಿಯಿಂದ ಮೆಲ್ಲಕ ತೂರಿಬರುವ ತಣ್ಣನ ಗಾಳಿಗೆ ನಿದ್ದಿ ಬಂದಂತಾಗಿ ಮತ್ತೆ ಕಣ್ಣು ಮುಚ್ಚತೊಡಗಿದೆ.

ಕರ್‌ಕರ್ ಕಿರ್ರ್ರ್ರರ್ 'ಹಲೋ...' ಎಂದು ಅಗಸಿಮುಂದ ಮೈಕ್ ಕೂಗೋದು ಕೇಳಿ ಕಿವಿಗೆ ಗೂಟ ಬಡಿದಂಗಾತು. ಈ ಸದ್ದಿಗೆ ಅಭಿ ಮೊಲೆ ಚಿಪೋದು ಬಿಟ್ಟು ಎರಡು ಕಾಲೆತ್ತಿ ಚಿಟ್ಟನ ಚೀರಿದ. ಅವಸ್ರ ಬವಸ್ರ ಕುಂಡಿಗೆ ಇಳಿಬಿದ್ದ ಕಪ್ಪನ ಕೂದಲನ್ನು ಗುಡ್ಡದಂತೆ ತುರುಬು ಕಟ್ಟಿ, ಅಭಿನ ಹೆಗಲಿಗೆ ಏರಿಸಿಕೊಂಡು ಪಡಸಾಲಿಗೆ ಬಂದೆ. ಆರಕ್ಕೆಲ್ಲಾ ಟೀವಿ ಮುಂದ ಭವಿಷ್ಯ ಕೇಳಲು ಕೂರುತಿದ್ದ ಗಂಡ ಮಾಂತೇಶ. ರಾಜಮ್ಮನ ಹೋಟಲಿಗೆ ಚಾವು ಕುಡ್ಯಾಕ ಹೋಗಿರಬೇಕು. ಮನ್ಯಾಗ ಕಾಣಲಿಲ್ಲ. ಟೀವ್ಯಾಗ ಈಟುದ್ದ ಈಭೂತಿ, ಗಂಧ ಮೆತ್ತಿಕೊಂಡು, ನುಣ್ಣಗೆ ಮೀಸೆ, ಗಡ್ಡ ಬೋಳಿಸಿಕೊಂಡು ಯಾರೋ ವಟವಟಂಥ ಭವಿಷ್ಯ ಹೇಳಲು ಕೂತಿದ್ರು. 'ಇವನಪ್ಪನ ತಿರುಬೋಕಿ...' ಅಂತ ಪಸಕ್ಕನ ಟೀವಿ ಬಂದುಮಾಡಿ ತಲಬಾಗ್ಲು ತೆರಿದಿದ್ದೇ ತಡ. 'ಬಡಬಡ ಬರ್ರಿ... ಪಟಪಟ್ ತಗರ್ರಿ... ಸಂಜೀವಿನಿ ಕೂದಲೆಣ್ಣೆ... ಕೂದಲು ಉದ್ರಕತ್ತಾವು, ಗಂಟ್‌ಗಂಟು ಬೀಳಕತ್ತಾವು ಕಮ್ತ್ಯಾಗ್ಯಾವಂತ... ಮನೆಲಿ ಕೂತು ಚಿಂತಿಮಾಡಬ್ಯಾಡ್ರಿ, ಬರ್ರಿ... ಇದು ಸಂಜೀವಿನಿ ಕೂದಲೆಣ್ಣೆ. ಹಿಮಾಲಯದ ಗಿಡಮೂಲಿಕೆಯಿಂದ ತಯಾರಿಸಿದ್ದು. ರಾತ್ರಿ ಹಚ್ಚಿ, ಮುಂಜಾನೆದ್ದು ತಲಿಸ್ನಾನ ಮಾಡಿದ್ರ ಸಾಕು. ಕೂದಲು ಉದ್ರೋದು, ಗಂಟು ಕಟ್ಟೋದು ಕಮ್ತ್ಯಾಗಿ, ಅಡುವಾಗಿ, ಕಪ್ಪಗ, ನಿಚ್ಚಳ ಬೆಳಿತಾವು. ಬಡಬಡ ಬರ್ರಿ... ಪಟಪಟ್ ತಗರ್ರಿ... ಸಸ್ತದೊಳಗ ಮಸ್ತ್ ಕೊಡ್ತಿವಿ... ಕೇವ್ಲ ನೂರೂಪಾಯಿ...' ಅಂತ ಅಗಸಿಮುಂದ ಮೈಕಿನ್ಯಾಗ ಕೂಗುವ ಕೂದಲೆಣ್ಣೆ ಮಾರುವವನನ್ನು ನೋಡಿದೆ. 'ಹಿಂದಮುಂದ ನೋಡಬ್ಯಾಡ್ರಿ ಬರ್ರಿ ಬಡಬಡ ತಗರ್ರಿ...' ಅಂತ ನನ್ನ ಕಪ್ಪನ ತುರುಬು ನೋಡಿನೇ ಮತ್ತೆ ಕರದಂಗಾತು. ಆತನ ಸುತ್ತ ಜೋತುಬಿದ್ದಿದ್ದ ಕೋಳಿಪುಚ್ಚದ ನೀಲವ್ವ, ಬೋಳುತಲಿ ಸುಟ್ಟಿ, ಜೋಗವ್ವನಂಗ ಜಡೆಕಟ್ಟಿದ ಸಣ್ಣೀರವ್ವ, ಬಳ್ಳೊಳ್ಳಿ ತುರುಬಿನ ಹಂಪವ್ವ ಇವ್ರೆಲ್ಲಾ ಕೂದಲೆಣ್ಣೆ ಮಾರುವವನ ಸುತ್ತ ಜೇನು ಹುಳದಂಗ ಮುಗಿಬಿದ್ದು ಕೂದಲೆಣ್ಣೆ